ನೆರೆಯ ತರಗತಿಯಿಂದ ಡೆಪ್ಯುಟೇಶನ್ ಮೇಲೆ ಬರುತ್ತಿದ್ದ ಬಡಿಗೆಯ ರೆಪ್ಯುಟೇಶನ್‌ಗೆ ಕುತ್ತಾಗದಂತೆ ರಾಜಮರ್ಯಾದೆಯಿಂದ ಬರಮಾಡಿಕೊಂಡು ಅದಕ್ಕೆ ಅಲಾಟ್ ಆದ ಕಾರ್ಯ ಮುಗಿಸಿ ಹೊರಡುವಾಗ ಅದರ ಸಾಮರ್ಥ್ಯಕ್ಕೆ ಬೆನ್ನು ತಟ್ಟಿ, ಹೊತ್ತು ತಂದ ಅದೇ ರಾಯಭಾರಿಯೊಂದಿಗೆ ಗೌರವದಿಂದ ಕಳಿಸಿಕೊಡುತ್ತಿದ್ದರು.

ಸೂರಜ್ ಎಂಬ ಒಬ್ಬ ಹುಡುಗನಿದ್ದ. ಅವರದ್ದೊಂದು ಬಟ್ಟೆ ಅಂಗಡಿ ಇತ್ತು. ಅಲ್ಲಿ ರೂಲ್ ದೊಣ್ಣೆಗಳಿಗೆ ರೋಲ್ ಆಗಿರುತ್ತಿದ್ದ ಬಟ್ಟೆಯ ಥಾನ್‌ಗಳು ಗ್ರಾಹಕರ ಬೇಡಿಕೆಗೆ ತಕ್ಕಂತೆ ಅಳತೆಯ ಸ್ಕೇಲಿನಲ್ಲಿ ಮಾಪನಗೊಂಡು ಕತ್ತರಿ ಪ್ರಯೋಗಕ್ಕೊಳಗಾಗಿ ಖಾಲಿಯಾದಾಗ ಅದರ ದೊಣ್ಣೆ ಪ್ರತ್ಯೇಕವಾಗುತ್ತಿತ್ತು. ಆ ದೊಣ್ಣೆಗಳನ್ನು ಅವರ ಅಪ್ಪ ಫೀಸ್ ಕಟ್ಟಲು ಬರುವಾಗ ತರುತ್ತಿದ್ದರು. 'ಸಾರ್, ನೀವು ಕೋಲಿನ ಬಗ್ಗೆ ಚಿಂತೆ ಮಾಡ್ಬೇಡಿ. ಎಷ್ಟು ಬೇಕು ಹೇಳಿ ತಂದುಕೊಡ್ತೇನೆ. ನೀವು ಇವನಿಗೆ ಚಂದ ಮಾಡಿ ಲೆಕ್ಕ ಕಲಿಸಿ ಬಿಡಿ. ಮುಂದೆ ಇವನು ಗಲ್ಲಾದಲ್ಲಿ ಕುಳಿತಾಗ ಎಲ್ಲಾ ಹಣ ಫಟಾಫಟ್ ಎಣಿಸಬೇಕು...' ಎನ್ನುತ್ತಾ ಗಲ್ಲಾದಲ್ಲಿ ಕೂರದ ನಮಗೂ ರೂಲ್ ದೊಣ್ಣೆಯ ರುಚಿ ತೋರಿಸುತ್ತಿದ್ದರು.

ಬಡಿಗೆಗಳ ಪ್ರಯೋಗ ಒಂದೆಡೆಯಾದರೆ, ಪನಿಶ್ಮೆಂಟಿನ ಇನ್ನಿತರ ಪ್ರಭೇದಗಳು ದೇಹದ ಇತರ ಭಾಗಗಳಲ್ಲೂ ಚಾಲನೆಗೊಳ್ಳುತ್ತಿದ್ದವು. ಕಿವಿಗಳನ್ನು ಮಡಚಿ ನಿಂಬೆಹೋಳಿನಂತೆ ಹಿಂಡುವುದು, ತಲೆಯನ್ನು, ಮುಂಗೈಯನ್ನು ಗೋಡೆಗೆ ಗುದ್ದಿಸುವುದು, ಕುಕ್ಕರುಗಾಲಿನಲ್ಲಿ ಕೂರಿಸಿ ಎರಡೂ ಕೈಗಳನ್ನೂ ಕಾಲುಗಳೊಳಗಿಂದ ಕತ್ತರಿಯಾಕಾರಕ್ಕೆ ತೂರಿಸಿ ಎಡಗೈಲಿ ಬಲಕಿವಿಯನ್ನೂ, ಬಲಗೈಲಿ ಎಡಕಿವಿಯನ್ನೂ ಹಿಡಿಸುವುದು... ಹೀಗೆ ಯೋಗ ಶಾಲೆಯಲ್ಲಿ ಕಲಿಸುವ ಎಲ್ಲಾ ಆಸನಗಳೂ ಇದರೊಳಗೆ ಮಿಳಿತವಾಗಿದ್ದು ಮಕ್ಕಳು ಅದೇ ಪೊಸಿಶನ್‌ನಲ್ಲಿ ಮಧ್ಯೆ ಮಧ್ಯೆ ಕಪಾಲಬಾತಿ ಪ್ರಾಣಾಯಾಮವನ್ನೂ ಮಾಡುತ್ತಿದ್ದರು. ಇದೇ ರೀತಿ ಕಿವಿ ಹಿಡಿಸಿ, ಐವತ್ತರಿಂದ ನೂರರವರೆಗೆ ಬಸ್ಕಿಯನ್ನೂ ಹೊಡೆಸಿದ್ದಿದೆ.

ಶಿಕ್ಷೆಯ ಸಮಯದಲ್ಲಿ ಹೆಚ್ಚು ಶೋಷಣೆಗೊಳಗಾಗುತ್ತಿದ್ದ ಕಿವಿಗಳು ಕೆಂಪಾಗಿ ಆ ನೋವಿಗೆ ಮೂಗು ಕಣ್ಣಿನಲ್ಲಿ ನೀರು ತುಳುಕುವಾಗ ಬಾಯಿಯೂ ಆಕಾರ ಕಳೆದುಕೊಂಡು ಗಂಟಲಿನ ಸಹಯೋಗದೊಂದಿಗೆ ರೋದನಕ್ಕೆ ತಕ್ಕ ತಾಳ ಮೇಳ ಒದಗಿಸುತ್ತಿತ್ತು.

ಹಲವು ಬಾರಿ ಉತ್ತರವನ್ನೋ, ಮಗ್ಗಿಯನ್ನೋ ಹೇಳದಿದ್ದಾಗ ಬೆನ್ನು ಬಗ್ಗಿಸಿಕೊಂಡು ಗುದ್ದುವುದು, ಎರಡು ಬೆರಳುಗಳ ನಡುವೆ ಪೆನ್ನೋ, ಪೆನ್ಸಿಲ್ಲನ್ನೋ ಇರಿಸಿ ಅದುಮುವುದು, ಸರಿಯಾದ ಉತ್ತರ ಹೇಳಿದ ವಿದ್ಯಾರ್ಥಿಯಿಂದ ಹೇಳದ ವಿದ್ಯಾರ್ಥಿಗೆ ಕಪಾಳಮೋಕ್ಷ ಮಾಡಿಸುವುದು... ಇಂತಹ ವಿಭಿನ್ನ ಪ್ರಯೋಗಗಳು ನಡೆಯುತ್ತಿದ್ದವು. ಮಗ್ಗಿ ಹೇಳುವಾಗ ಉಗ್ಗುತ್ತಾ ತಲೆತಗ್ಗಿಸುವವರನ್ನು ಕಂಡು ಕೆರಳುತ್ತಿದ್ದರು. ಜೂನಿಯರ್ ಕ್ಲಾಸಿನ ಜಾಣ ವಿದ್ಯಾರ್ಥಿಯನ್ನು ಕರೆಸಿ ಅದೇ ಮಗ್ಗಿಯನ್ನು ಹೇಳಿಸಿ, ಮಗ್ ಮಾಡಲಾಗದೆ ಮಂಕಾಗಿ ನಿಂತಿರುತ್ತಿದ್ದ ಸೀನಿಯರ್‌ಗಳಿಗೆ ಕಪಾಳಮೋಕ್ಷದ ಪ್ರಸಾದ ಕರುಣಿಸುತ್ತಿದ್ದರು.

ಕೆನ್ನೆಗೆ ಹೊಡೆಯುವಾಗ ಗ್ರಿಪ್‌ಗೆಂದು ಎಡಗೈಲಿ ಮೂಗನ್ನು ಹಿಡಿದು ಬಲಗೈಲಿ ಬಾರಿಸಬೇಕಿತ್ತು. ಗ್ರಿಪ್ ನೀಡುವ ಅಂಗ ಕೆಲವೊಮ್ಮೆ ಲೀಕ್ ಆಗಿ ಬಾರಿಸುವವರ ಹೊಟ್ಟೆ ಗಲಬರಿಸಿ ವಾಕರಿಸುತ್ತಿತ್ತು. ಕಪಾಳಮೋಕ್ಷಕ್ಕೊಳಗಾದವರು ಮರುದಿನ ಅದನ್ನು ಲಿಖಿತ ಜಪದಂತೆ ನೂರು ಬಾರಿ ಬರೆದು ತರುವ ಶಿಕ್ಷೆಯ ಅಡಿಷನಲ್ ಬೋನಸ್ ಸಹ ಇರುತ್ತಿತ್ತು.

ಇಂಗ್ಲಿಷ್ ಶಾಲೆಗಳ ಕೆಲವು ನಾಜೂಕಿನ ಮಕ್ಕಳಿಗೆ ಬಾರು ಕೋಲಿನಿಂದ ಬಾರಿಸಿದರೆ ಅವರು ಮೂರು ದಿನ ಮೇಲೇಳುತ್ತಿರಲಿಲ್ಲ. ಅಂತಹ ಮಕ್ಕಳಿಗೆ ನಂತರದ ದಿನಗಳಲ್ಲಿ ಬಾರಿಸದೆ



ಬೆಂಚಿನ ಮೇಲೆ ನಿಲ್ಲಿಸುತ್ತಿದ್ದರು. ಅವರು ಎತ್ತರದ ಪ್ರದೇಶದಲ್ಲಿದ್ದಾಗ ಆಮ್ಲಜನಕದ ಕೊರತೆಯಿಂದ ಬಿಕ್ಕಳಿಸುವಂತೆ ಬಿಕ್ಕಳಿಸುತ್ತಿದ್ದರು. ಉಳಿದ ಮಕ್ಕಳ ಲಕ್ಷ್ಯ ಅತ್ತ ಸರಿದು ಕೆಲವರು ಕಿಸಕ್ಕೆಂದರೆ ಮೇಷ್ಟ್ರುಗಳ ಕೋಪ ನೆತ್ತಿಗೇರಿ ಕೆನ್ನೆಗೆ ಬಿಗಿದು ಗೆಟ್ ಔಟ್ ಎಂಬ ಆದೇಶದೊಂದಿಗೆ ಅವರನ್ನು ಹೊರದಬ್ಬುತ್ತಿದ್ದರು. ತೀರಾ ತುಂಟ ಮಕ್ಕಳನ್ನು ಹೊರಗೆ ನೀಲ್ ಡೌನ್ ಮಾಡಿಸುವ ಅಭ್ಯಾಸವಿತ್ತು.

ಹಳ್ಳಿ ಶಾಲೆಗಳ ಪುಂಡ ಮಕ್ಕಳನ್ನು ಹೀಗೆ ಹೊರದಬ್ಬುವಂತಿರಲಿಲ್ಲ. ಅವರು ಕಂಡವರ ತೋಟಕ್ಕೆ ನುಗ್ಗಿ ಸೀಬೇಕಾಯಿ, ಮಾವಿನ ಕಾಯಿ, ಬಾಳೆಗೊನೆಗಳನ್ನು ಧ್ವಂಸ ಮಾಡುತ್ತಿದ್ದರು. ಇನ್ನು ನೀಲ್ ಡೌನ್ ಎಂಬ ಮಂಡಿ ಊರಿಸುವ ಶಿಕ್ಷೆ ಅವರಿಗೆ ನೀರು ಕುಡಿದಷ್ಟೇ ನಿಸೂರು. ಮಂಡಿಯಲ್ಲೇ ಶಾಲೆ ತುಂಬಾ ಗಸ್ತು ತಿರುಗಿ ಗುಲ್ಲೆಬ್ಬಿಸುತ್ತಿದ್ದರು. ವಿಭಿನ್ನ ಅಚ್ಚಿನಿಂದ ಹೊರಬಂದ ಇಂತಹ ಸ್ಪೆಷಲ್ ಪೀಸುಗಳನ್ನು ಮನೆಗಳಲ್ಲಿ ಚಾವಣಿಗೆ ನೇತು ಹಾಕಿ ಕೆಳಗಿನಿಂದ ಮೆಣಸಿನಕಾಯಿ ಹೊಗೆ ಹಾಕುತ್ತಿದ್ದರು. ಬಹುಶಃ ಇದು ಇಂದಿನ ಮಕ್ಕಳು ಕಲ್ಪಿಸಿಕೊಳ್ಳಲೂ ಆಗದಂತಹ ಅತ್ಯುಗ್ರ ಶಿಕ್ಷೆ.

ಅಂದು 'ಪೇರೆಂಟ್ಸ್ ಮೀಟಿಂಗ್' ಎಂದು ಪೋಷಕರನ್ನು ವಿಶೇಷವಾಗಿ ಶಾಲೆಗೆ ಆಹ್ವಾನಿಸಿ ಮಕ್ಕಳ ಪ್ರೋಗ್ರೆಸ್ ತಿಳಿಸುವ ಕಾನ್ಸೆಪ್ಟ್ ಇರಲಿಲ್ಲ. ಸಂತೆಯಲ್ಲೋ, ಶೆಟ್ರಂಗ್ಡಿಯಲ್ಲೋ ಅಪ್ಪಂದಿರಿಗೆ ಮೇಷ್ಟ್ರುಗಳು ಸಿಕ್ಕಿ ಮಕ್ಕಳ ಜನ್ಮ ಜಾಲಾಡಿರುತ್ತಿದ್ದರು. ಆಗ ಮನೆಯಲ್ಲೂ ಅಪ್ಪಂದಿರಿಂದ ಪೂಜೆ, ಬೆತ್ತದ ಸೇವೆ ಎಲ್ಲಾ ನಡೆಯುತ್ತಿತ್ತು. ಶಾಲೆ ಕಲಿತ ಅಮ್ಮಂದಿರ ಸಂಖ್ಯೆ ಆಗ ಬಹಳ ಕಡಿಮೆ ಇತ್ತು. ಶಿಕ್ಷೆ ಅನುಭವಿಸಿದ ಮಕ್ಕಳಿಗೆ ಅಂತಹ ಅಮ್ಮಂದಿರ ಪ್ರೀತಿಯ ಅಪ್ಪುಗೆ, ಅಕ್ಕರೆಯ ಮುಲಾಮು ದೊರಕುತ್ತಿತ್ತು.

ವಿದ್ಯೆಯೆಂಬ ಕಬ್ಬಿಣದ ಕಡಲೆಯನ್ನು ಮಕ್ಕಳು ನುರಿಸಲು ಪಡುವ ಕಷ್ಟ ಕಂಡು ಅವರು ಮರುಗುತ್ತಿದ್ದರು. ಇದಕ್ಕೆ ಅಪವಾದವೆಂಬಂತೆ ಕೆಲವು ಅಮ್ಮಂದಿರು ಹಲ್ಲೆಯಿಂದ ಎಲ್ಲೆಂದರಲ್ಲಿ ಬರೆ ಇಟ್ಟು ತೊಡೆಯ ಒಳಭಾಗಕ್ಕೆ ಒಳಶುಂಠಿ ಕೊಟ್ಟು ಚರ್ಮದ ವರ್ಣವನ್ನು ತಾತ್ಕಾಲಿಕವಾಗಿ ಬದಲಿಸುತ್ತಿದ್ದರು.ಚತುರೋಪಾಯಗಳಾದ ಸಾಮ ದಾನ ಭೇದ ದಂಡಗಳೆಂಬ ಶಿಕ್ಷೆಯ ಶಾಸ್ತ್ರೀಯ ವಿಧಾನಗಳನ್ನು ಅನುಸರಿಸುತ್ತಿದ್ದವರು ಅಪರೂಪ. ಇಂದಿನ ರಿಯಾಲಿಟಿ ಶೋಗಳಲ್ಲಿ ಮಕ್ಕಳು ಬೇಸಿಕ್ ಪಾಠವನ್ನು ಕಲಿಯದೆ ದಿಢೀರನೆ ಕೊನೆಯ ಅಧ್ಯಾಯಕ್ಕೆ ತಲುಪಿ ಇನ್‌ಸ್ಟಂಟ್ ಪ್ರತಿಭೆಗಳಾಗಿ ವೇದಿಕೆ ಏರುವಂತೆ ಅಂದಿನ ಗುರುಗಳು ಮಾತಾಡುವ ಮೊದಲೇ ಅವರ ದಂಡಗಳು ಮೇಲೇರುತ್ತಿದ್ದವು. 'ದಂಡಂ ದಶಗುಣಂ' ಎನ್ನುತ್ತಾ ದಂಡದಿಂದಲೇ ಎಲ್ಲದರ ಆರಂಭ, ದಂಡದಿಂದಲೇ ಸಮಾರೋಪ!

ಇಂದು ಇಂತಹ ಶಿಕ್ಷೆಗಳನ್ನು ಪ್ರಯೋಗಿಸಿದರೆ ಶಾಲೆ ಸೀಜ್ ಆಗಿ ಶಿಕ್ಷಿಸಿದವರು ಕಂಬಿ ಎಣಿಸಬೇಕಾಗುವುದು. ಹೀಗೂ ಉಂಟೆ...!? ಎಂಬ ಹೆಡ್‌ಲೈನ್‌ನೊಂದಿಗೆ ಗಲಭೆ ಗ್ಲೋಬಲ್ ಲೆವೆಲ್‌ನಲ್ಲಿ ಸುದ್ದಿಯಾಗುವುದು. ಹೊಸ ಪೀಳಿಗೆಯ ನಾಜೂಕಿನ ಕೂಸುಗಳಿಗೆ ಸೋಲು, ಫೇಲು, ಕೋಲು ಎಲ್ಲಾ ಅಪರಿಚಿತ ಪದಗಳು. ಬಡಿಗೆಯ ಬೇಸಿಕ್ ಬೀಟ್ಸ್ ಪರಿಚಯವೂ ಅವರಿಗಿಲ್ಲ.

'ದಡ್ಡನಿಗೆ ದೊಣ್ಣೆ ಪೆಟ್ಟು, ಜಾಣನಿಗೆ ಮಾತಿನ ಪೆಟ್ಟು' ಎಂಬ ಗಾದೆ ಈಗ ಔಟ್‌ಡೇಟೆಡ್. ಪೆಟ್ಟುರಹಿತ ಬೋಧನಾ ಕ್ರಮ, ಪಾಲನಾ ಕ್ರಮ ಇಂದಿನವರ ಆಯ್ಕೆ. ನಮ್ಮ ಬದುಕನ್ನು ಸುಂದರವಾಗಿ ರೂಪಿಸಿಕೊಳ್ಳಲು ಶಕ್ತಿ ತುಂಬಿದ ಅಂದಿನ ಗುರುಗಳು ಇಂದು ನಮಗೆದುರಾದರೆ ಅದೇ ಪೂಜ್ಯ ಭಾವನೆಯಿಂದ ಕೈ ಜೋಡಿಸುವೆವು. ಗುರು ಶಿಷ್ಯ ಸಂಬಂಧಕ್ಕೆಂದೂ ಆ ಶಿಕ್ಷಾ ಪರಂಪರೆ ಅಡ್ಡಿಯಾಗಿದ್ದಿಲ್ಲ. ದಂಡನೆಯ ಆ ಸ್ಟ್ರೋಕ್‌ಗಳು, ಬದುಕು ನೀಡುವ ಪೆಟ್ಟುಗಳನ್ನು ದಿಟ್ಟತನದಿಂದ ಎದುರಿಸಲು ಶಕ್ತವಾದ ವ್ಯಕ್ತಿತ್ವ ರೂಪಿಸಿರುವುದು ಸುಳ್ಳಲ್ಲ.

ಪ್ರತಿಕ್ರಿಯಿಸಿ: **feedback@sudha.co.in**